ಇರುವುದಿಲ್ಲ. ಅದಕ್ಕೆ ಏನಾದರೂ ಮಾಡಿ 10% ತೆಗೆದುಕೊಳ್ಳೋಣ ಎನ್ನುವುದನ್ನು ನಾವು ಈಗಾಗಲೇ Agriculture Department, Horticulture Department, Social Welfare Department, Minority Department ಇವರೆಲ್ಲರ ಹತ್ತಿರ ಚರ್ಚೆ ಮಾಡುತ್ತಿದ್ದೇನೆ. ಇದನ್ನು successful ಮಾಡುತ್ತೇನೆ. ಇದಕ್ಕೆ ತಮ್ಮೆಲ್ಲರ ಸಹಕಾರ ಇರಬೇಕು.

ಅಧ್ಯಕ್ಷರು:– ಸುಧಾಕರ್, ಇಲ್ಲ. ಬಸವರಾಜ ರಾಯರೆಡ್ಡಿ ಕೇಳಿ.

ಪ್ರಶ್ನೆಯ ಸಂಖ್ಯೆ: 73(526)

ಡಾ॥ ಸುಧಾಕರ್.ಕೆ (ಚಿಕ್ಕಬಳ್ಳಾಪುರ)

(ಮಾನ್ಯ ಸದಸ್ಯರು ಗೈರು ಹಾಜರಿದ್ದರು)

ವಿದ್ಯುತ್ ಉತ್ಪಾದನೆ ಹಾಗೂ ಕೊರತೆ

74(443); ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಿ)

ಅ) ರಾಜ್ಯದಲ್ಲಿ ಎಷ್ಟು ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆಯನ್ನು ಸರ್ಕಾರದಿಂದ ಹಾಗೂ ಖಾಸಗಿ ಉದ್ದಿಮೆದಾರರಿಂದ ಉತ್ಪಾದನೆ ಮಾಡಲಾಗುತ್ತಿದೆ; (ಮೆಗಾ ವ್ಯಾಟ್ ಮತ್ತು ಮಿಲಿಯನ್ ಯೂನಿಟ್‌ಗಳಲ್ಲಿ ವಿವರ ನೀಡುವುದು)

ಆ) ಜಲ ವಿದ್ಯುತ್, ಥರ್ಮಲ್ ವಿದ್ಯುತ್, ಗಾಳಿಯಿಂದ, ಸೌರಶಕ್ತಿಯಿಂದ ಇತ್ಯಾದಿ ಮೂಲಗಳಿಂದ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆಯೆ; ಎಷ್ಟೆಷ್ಟು ಪ್ರಮಾಣದಲ್ಲಿ ಉತ್ಪಾದನೆ ಮಾಡಲಾಗುತ್ತಿದೆ (ಪ್ರತ್ಯೇಕವಾದ ವಿವರ ನೀಡುವುದು)

ಇ) ಈ ವಿದ್ಯುತ್ ಉತ್ಪಾದನೆಯಿಂದ ರಾಜ್ಯದ ಎಲ್ಲಾ ಬಳಕೆದಾರರಿಗೆ ಅಂದರೆ ಕೈಗಾರಿಕೆಗಳು, ಕೃಷಿಕರಿಗೆ ನಿರಂತರವಾಗಿ 24 ಗಂಟೆಗಳು ವಿದ್ಯುತ್ತನ್ನು ಪೂರೈಸಲು ಸಾಧ್ಯವೇ;